ಈ) ಬರ ಸಂಭವನೀಯ ಪ್ರದೇಶದಲ್ಲಿ ಕೃಷಿ ಇಲಾಖೆಯಿಂದ ಬೀಳುವ ಮಳೆ ನೀರು ಇಂಗುವಂತೆ ಭೂಸಾರ ಸಂರಕ್ಷಣೆ ಮಾಡಲು ಸರ್ಕಾರ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಹೊಂದಿರುವ ಯೋಜನೆಗಳು ಹಾಗೂ ಅದಕ್ಕೆ ಮೀಸಲಿರಿಸಲಾದ ಹಣದ ವಿವರ ಈ ಕೆಳಕಂಡಂತಿದೆ.

ಯೋಜನೆ	ಲಕ್ಷ ರೂ.ಗಳಲ್ಲಿ
1. ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ.	570.00
2. ನದಿ ಕಣಿವೆ ಯೋಜನೆ	597.60
3. ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ (ಡೆನಿಡಾ)	16.153
4. ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ	29.75
5. ವಿಶೇಷ ಘಟಕ ಯೋಜನೆ.	377.08
6. ಗಿರಿಜನ ಉಪಯೋಜನೆ	103.35

ಮೇಲಿನ ಯೋಜನೆಗಳಿಂದಲೇ ಅಲ್ಲದೇ ಜೆ.ಆರ್.ವೈ. ನೆಮ್ಮದಿ ಉದ್ಯೋಗ ಭರವಸೆ ಯೋಜನೆ ದಶಲಕ್ಷ ಭಾವಿ ಯೋಜನೆ ಬರಗಾಲ ಪ್ರದೇಶಾಭಿವೃದ್ಧಿ ಯೋಜನೆ, ಮರಳುಗಾಡು ಪ್ರದೇಶಾಭಿವೃದ್ಧಿ ಯೋಜನೆಗಳ ಮೂಲಕವೂ ಸಹ ಭೂಸಾರಸಂರಕ್ಷಣಾ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ.

ವಿಷಯ:- ವಿರಾಜಪೇಟೆ ವಿಭಾಗದಲ್ಲಿ ಹೊಸ ಸುವಿಹಾರಿ ಬಸ್‌ಗಳನ್ನು ಒದಗಿಸುವುದು.

1461 (2446) (ಎ) **ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿರಾಜಪೇಟೆ ವಿಭಾಗದಲ್ಲಿ ಒಡಾಡುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸುವಿಹಾರಿ ಬಸ್ಸುಗಳು ಹೆಸರಿಗೆ ಮಾತ್ರ ಸುವಿಹಾರಿಯಾಗಿದ್ದು ಜನಸಾಮಾನ್ಯ ನೀಡುವ ಟಿಕೆಟ್ ದರಕ್ಕೆ ಅನುಗುಣವಾಗಿರದೆ ತೀರಾ ಔಟ್ ಡೇಟೆಡ್ ಬಸ್ಸುಗಳನ್ನು ಓಡಿಸುತ್ತಿದ್ದು ಕನಿಷ್ಟ ಸೀಟುಗಳು ಸಹ ಉತ್ತಮ ಸ್ಥಿತಿಯಲ್ಲಿ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಾಗಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಇ) ಸುವಿಹಾರಿ ಬಸ್ಸುಗಳು ಬೆಂಗಳೂರು ಮತ್ತು ಮೈಸೂರು ವಿಭಾಗದಿಂದ ಸರಿಯಾದ ನಿಗದಿತ ಸಮಯಕ್ಕೆ ತೆರಳದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಈ ತೊಂದರೆಯನ್ನು ನಿವಾರಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ಹೌದು. ಎರಡು ಸುವಿಹಾರಿ ವಾಹನಗಳನ್ನು ಬೆಂಗಳೂರು–ವಿರಾಜಪೇಟೆ ಮಾರ್ಗದಲ್ಲಿ

ಕಾರ್ಯಾಚರಣೆ ಮಾಡುತ್ತಿದೆ. ಪ್ರಸ್ತುತವಾಗಿ ಈ ಮಾರ್ಗದಲ್ಲಿ ಓಡಾಡುವ ವಾಹನಗಳು ಈಗಾಗಲೇ ನಿಗದಿತ ಕಿ. ಮೀ. ಗಳನ್ನು ಕ್ರಮಿಸಿದೆ. ನಿಗಮದ ಕಾರ್ಯನೀತಿಯಂತೆ 3.5 ಲಕ್ಷ ಕಿ. ಮೀ. ಕ್ರಮಿಸಿದ ಸುವಿಹಾರಿ ವಾಹನಗಳನ್ನು ಬದಲಿಸಲಾಗುವುದು. ನಿಗಮದ ಆರ್ಥಿಕ ಪರಿಸ್ಥಿತಿಯಿಂದ ಈ ವಾಹನಗಳನ್ನು ಸಕಾಲಕ್ಕೆ ಬದಲಿಸಲು ಕ್ರಮ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಈ ವಾಹನಗಳ ಸ್ಥಿತಿಗತಿಯನ್ನು ಕ್ರಮಬದ್ಧವಾಗಿ ಕಾಪಾಡುವ ಉದ್ದೇಶದಿಂದ ಕವಚ ದುರಸ್ಥಿ, ಆಸನಗಳ ದುರಸ್ಥಿಯನ್ನು ಘಟಕ ಮಟ್ಟದಲ್ಲೇ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಈ ವಾಹನಗಳನ್ನು ಬದಲಾಯಿಸುವವರೆಗೆ ಅವುಗಳ ಸ್ಥಿತಿಗತಿಯನ್ನು ಗಮನದಲ್ಲಿಟ್ಟುಕೊಂಡು ಸಕಾಲಕ್ಕೆ ದುರಸ್ಥಿಗೊಳಿಸಲಾಗುವುದು.

ಇ) ಮೈಸೂರು–ವಿರಾಜಪೇಟೆ ಸುಖಾಸೀನ ಬಸ್ಸು ಸರಿಯಾಗಿ ಕಾರ್ಯಾಚರಣೆಯಾಗದಿರುವುದು ನಿಜ. ಸದರಿ ವಾಹನವು ಹಳೆಯದಾಗಿದ್ದು ತುಂಬಾ ರಿಪೇರಿ ಇರುವುದರಿಂದ ಸದರಿ ಬಸ್ಸನ್ನು ಬದಲಾಯಿಸಿ ದಿನಾಂಕ: 5-8-96ರಿಂದ ಖಾಯಂ ಆಗಿ ಕಾರ್ಯಾಚರಣೆ ಮಾಡುತ್ತಿದೆ. ಬೆಂಗಳೂರು-ವಿರಾಜಪೇಟೆ ಮಾರ್ಗವು ಖಾಯಂ ಆಗಿ ಕಾರ್ಯಚರಣೆ ಆಗುತ್ತಿದೆ.

ಈ) ಉದ್ಭವಿಸುವುದಿಲ್ಲ.

ವಿಷಯ:- 1996-97ನೇ ಸಾಲಿನಲ್ಲಿ ವಸತಿ ಯೋಜನೆಯಡಿಯಲ್ಲಿ ತೆಗೆದುಕೊಂಡ ಕಾರ್ಯಕ್ರಮಗಳು.

1464 (2400) **ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):-** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) 1996-97ನೇ ಸಾಲಿನಲ್ಲಿ ಸರ್ಕಾರ ವಸತಿ ಯೋಜನೆಯಡಿಯಲ್ಲಿ ತೆಗೆದುಕೊಂಡ ಕಾರ್ಯಕ್ರಮಗಳು ಯಾವುವು? (ಅವುಗಳ ವಿವರ ನೀಡುವುದು).

ಆ) ಪ್ರತಿಯೊಂದು ಯೋಜನೆಗೆ ನಿಗದಿಪಡಿಸಿದ ಆರ್ಥಿಕ ಗುರಿ ಎಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-

ಆ) 96-97ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಯಲ್ಲಿ ಸರ್ಕಾರ ಕೈಗೊಂಡ ಕಾರ್ಯಕ್ರಮಗಳು ಕೆಳಗಿನಂತಿದೆ.

ಮನೆಗಳು ನಿವೇಶನಗಳು

ಯೋಜನೆ	ಭೌತಿಕ ಗುರಿ	
	ಗ್ರಾಮ	ನಗರ
ಆಶ್ರಯ	142192	65134